22. ಮೈಸೂರು	12,14,830	14,98,639
23. ರಾಯಚೂರು	84,630	91,235
24. ಶಿವಮೊಗ್ಗ	7,45,000	5,93,300
25. ತುಮಕೂರು	36,49,000	23,90,000
26. ಉಡುಪಿ	9,350	10,287
27. ಉತ್ತರ ಕನ್ನಡ	17,584	36,788
ಒಟ್ಟು	1,40,15,357	1,07,29,603

ತುರುವೇಕೆರೆ ನಗರದಲ್ಲಿ ಶಾದಿಮಹಲ್ ನಿರ್ಮಾಣ

1120 (1310) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ನಗರದಲ್ಲಿ ಮುಸ್ಲಿಂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಶಾದಿಮಹಲ್ ನಿರ್ಮಾಣ ಮಾಡದಿರಲು ಕಾರಣವೇನು ?

ಇ) ಶಾದಿಮಹಲ್ ನಿರ್ಮಾಣ ಮಾಡಲು ಸರ್ಕಾರಕ್ಕೆ ಬೇಡಿಕೆ ಬಂದಿಲ್ಲವೆ ?

ಈ) ಈ ವರ್ಷದ ಆಯವ್ಯಯದಲ್ಲಿ ಶಾದಿಮಹಲ್ ನಿರ್ಮಿಸಲು ಅನುದಾನ ಒದಗಿಸಲಾಗುವುದೇ ?

ಶ್ರೀ ಎಂ.ಎಲ್. ಉಸ್ತಾದ್ (ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್ ರಾಜ್ಯ ಸಚಿವರು) :

ಅ) ಹೌದು.

(ಆ) ಮತ್ತು (ಇ) ಗೆ :

ಇದುವರೆವಿಗೂ ತುರುವೆಕೇರೆ ಟೌನ್‌ನಲ್ಲಿ ಶಾದಿಮಹಲ್ ನಿರ್ಮಾಣಕ್ಕಾಗಿ ಯಾವುದೇ ಪ್ರಸ್ತಾವನೆಗಳು ಬಂದಿರುವುದಿಲ್ಲ. ಆದರೆ ಮಾಯಸಂದ್ರದಲ್ಲಿ ಶಾದಿಮಹಲ್ ನಿರ್ಮಾಣಕ್ಕೆ ಪ್ರಸ್ತಾವನೆ ಬಂದಿದ್ದು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಈ) ಇಲ್ಲ.

ರಾಜ್ಯದಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಬೋರ್‌ಗಳ ಮಂಜೂರಾತಿ

1122 (1312) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಗಂಗಾಕಲ್ಯಾಣ ಯೋಜನೆಗೆ ಇರುವ ಬೇಡಿಕೆ ಎಷ್ಟು (ಜಿಲ್ಲಾವಾರು ಮಾಹಿತಿ ಕೊಡುವುದು) ?

ಆ) ವೈಯಕ್ತಿಕ ಕೊಳವೆಬಾವಿಗೆ ಎಷ್ಟು ಫಲಾನುಭವಿಗಳು ಅರ್ಜಿ ಹಾಕಿರುತ್ತಾರೆ ; ಜಿಲ್ಲಾವಾರು ಮಾಹಿತಿ ಕೊಡುವುದು ?

ಇ) ಪ್ರತಿ ತಾಲ್ಲೂಕಿಗೆ 2 ರಿಂದ 4 ಕೊಳವೆ ಬಾವಿಗಳನ್ನು ನಿಗದಿಪಡಿಸಿದ್ದಲ್ಲಿ, ಎಷ್ಟು ವರ್ಷಗಳಲ್ಲಿ ಈ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಬಹುದು ?